# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1306(1589)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಸರ್ವೋಚ್ಚ ನ್ಯಾಯಾಲಯದಲ್ಲಿರುವ ರಾಜ್ಯದ ಅಂತರ್‌ರಾಜ್ಯ ಗಡಿ ವಿವಾದಗಳ ಬಗ್ಗೆ

(ಅ) ಪ್ರಸ್ತುತ ಕರ್ನಾಟಕ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತರ್‌ರಾಜ್ಯ ಗಡಿ ವಿವಾದಗಳಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ವ್ಯಾಜ್ಯ/ವಿವಾದಗಳು ಯಾವುವು; ಈ ವಿವಾದಗಳು ಯಾವ ಯಾವ ರಾಜ್ಯಗಳ ಜೊತೆ ಮುಂದುವರಿಯುತ್ತಿವೆ; ಈ ವಿವಾದಗಳ ಕುರಿತಾಗಿ ಇದುವರೆಗಿನ ಪ್ರಗತಿ ಏನು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಈ ಅಂತರ್‌ರಾಜ್ಯ ಗಡಿ ವಿವಾದಗಳಿಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸುತ್ತಿರುವ ವಕೀಲರು, ವಕೀಲರ ತಂಡ ಯಾವುದು; ಸರ್ವೋಚ್ಚ ನ್ಯಾಯಾಲಯಕ್ಕೆ ವಿವಾದ ಕೊಂಡೊಯ್ದ ದಿನಾಂಕದಿಂದ ಇದುವರೆಗಿನ ಸದರಿಯವರ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು;

(ಇ) ಈ ವಿವಾದಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಸಮರ್ಪಕವಾ ಗಿ ಎದುರಿಸುವ ದೃಷ್ಟಿಯಿಂದ ಇದುವರೆವಿಗೆ ವಿನಿಯೋಗಿಸಲಾದ ಹಣ ಎಷ್ಟು; ವಕೀಲರು/ವಕೀಲರ ತಂಡಕ್ಕೆ ಪಾವತಿಸಲಾದ ಶುಲ್ಕ ಎಷ್ಟು; (ಪ್ರತ್ಯೇಕವಾದ ವಿವರಗಳನ್ನು ವರ್ಷಾವಾರು ಸಂಪೂರ್ಣ ಮಾಹಿತಿಯೊಂದಿಗೆ ಒದಗಿಸುವುದು)

(ಈ) ಅಂತರ್‌ರಾಜ್ಯ ಗಡಿ ಸದರಿ ವಿವಾದಗಳಿಗೆ ಸಂಬಂಧಿಸಿದಂತೆ ಇದುವರೆಗೆ ಸಾಧಿಸಿದ ಪ್ರಗತಿ ಕುರಿತಾಗಿ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ? (ವಿವರ ಒದಗಿಸುವುದು)